| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 1244/2021 | | | |
| ಸಾಕ್ಷಿದಾರರ ಹೆಸರು | ಮಮತ | | |
| ತಂದೆ /ಗಂಡನ ಹೆಸರು | ಮಂಜುನಾಥ | ಪಿಡಬ್ಲ್ಯೂ | 2 |
| ವಯಸ್ಸು | 37 ವರ್ಷ | ಸಿಡಬ್ಲ್ಯೂ | 3 |
| ಉದ್ಯೋಗ | ಗೃಹಿಣಿ | ಪ್ರಮಾಣ ವಚನ | |
| ವಾಸ ಸ್ಥಳ | ಬೆಂಗಳೂರು | ಭೋದಿಸಿದ ದಿನಾಂಕ | 28-03-2024 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಚಾಸ-1 ನನ್ನ ತಂಗಿ, ಚಾಸ-2 ನನ್ನ ತಾಯಿ. ಆರೋಪಿ ಚಾಸ-1 ರವರ ಗಂಡ. ದಿಃ03-03-2010 ರಲ್ಲಿ ಚಾಸ-1 ರವರ ಮದುವೆ ಆರೋಪಿ ಜೊತೆ ಮಾತುಕತೆ ಮಾಡಿ ಮಾಡಿರುತ್ತೇವೆ. 2 ವರ್ಷಗಳ ಕಾಲ ಚೆನ್ನಾಗಿ ನೋಡಿಕೊಂಡಿದ್ದು ಮದುವೆ ಕಾಲಕ್ಕೆ ಚಾಸಾ-1 ರವರಿಗೆ 210 ಗ್ರಾಂ ಚಿನ್ನ ಕೊಟ್ಟಿದ್ದು ಆರೋಪಿಗೆ 40 ಗ್ರಾಂ ಚಿನ್ನ ಕೊಟ್ಟಿದ್ದು ಬ್ರಾಸ್ ಲೈ ಟ್ ಚೈನ್ ಕೊಟ್ಟಿದ್ದು ವರದಕ್ಷಣೆಯಾಗಿ 3 ಲಕ್ಷ ರೂ ಕೊಟ್ಟಿದ್ದು ಮದುವೆಯನ್ನು ಚಿಂತಾಮಣಿಯಲ್ಲಿ ಮಾಡಿಕೊಟ್ಟಿದ್ದು ನಂತರ ಅವರಿಗೆ ಒಂದು ಹೆಣ್ಣು ಮತ್ತು ಗಂಡು ಮಗುವಾಗಿದ್ದು ಮಕ್ಕಳಾದ ನಂತರ ಆರೋಪಿ ಹಣ ಬೇಕು ಅಂತ ಕಿರುಕುಳ ನೀಡಿರುತ್ತಾರೆ. ನಂತರ ಚಿಂತಾಮಣಿಯಲ್ಲಿ ಬೇರೆ ಮನೆ ಮಾಡಿಕೊಂಡಿದ್ದರು. ನನಗೆ ಬಿಜಿನೆಸ್ ನಷ್ಟವಾಗಿದ್ದು ಹಣ ಬೇಕು ಅಂತ ಚಾಸ 1 ರವರನ್ನು ಕಳುಹಿಸಿರುತ್ತಾರೆ. ನಂತರ ಆರೋಪಿ ಬರುತ್ತಾರೆ ಅಂತ ಕಾದಿದ್ದು ಬಂದಿರದೆ ಇದ್ದರಿಂದ ಬೆಂಗಳೂರಿನಲ್ಲಿ ದೂರು ದಾಖಲು ಮಾಡಿರುತ್ತೇವೆ. ನಂತರ ಈ ವಿಚಾರವಾಗಿ ಚಾಸ-1 ರವರು ದೂರು ದಾಖಲು ಮಾಡಿರುತ್ತಾರೆ. ಈ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ.

ದಿಃ17-02-2021 ಚಾಸಾ-1 ಮತ್ತು ಆರೋಪಿ ವಾಸ ಇದ್ದ ಪ್ರಭಾಕರ ಬಡಾವಣೆಯಲ್ಲಿ ಪಂಚನಾಮೆಯನ್ನು 12 ರಿಂದ 1-30 ಗಂಟೆಯವರೆಗೆ ಚಾಸಾ1 ರವರು ತೋರಿಸಿದಂತೆ ಪಂಚನಾಮೆ ಮಾಡಿರುತ್ತಾರೆ. ಗೈರುಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುವಲ್ಲಿ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

ನಿಪಿ-2 ರಲ್ಲಿನ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸಾಕ್ಷಿಯು ಸಹಿಯನ್ನು ನಿಪಿ 2 (ಬಿ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ ಟಿ ವಿ ಎಸ್ ವಕೀಲರಿಂದಃ

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ದಿಃ03-03-2010 ರಲ್ಲಿ ಮದುವೆ ಮಾತುಕತೆಯಾಗಿದ್ದು ಆ ಮಾತುಕತೆಯಲ್ಲಿ ನಾನು ಭಾಗವಹಿಸಿರುತ್ತೇನೆ. ಎರಡು ವರ್ಷಗಳ ಕಾಲ ಆರೋಪಿ ಚೆನ್ನಾಗಿ ನೋಡಿಕೊಂಡಿದ್ದು ಆಗ ಚಾಸ-1 ಮತ್ತು ಆರರೋಪಿ ಪ್ರಭಾಕರ ಬಡಾವಣೆಯಲ್ಲಿ ವಾಸ ಇರುತ್ತಾರೆ. ಆರೋಪಿ ಮನೆಯಲ್ಲಿ ಅವರ ಅಪ್ಪ ಅಮ್ಮ ತಮ್ಮ ಇರುತ್ತಾರೆ. ಎರಡು ವಶಷಗಳ ಕಾಲ ಚೆನ್ನಾಗಿ ಇದ್ದಾಗ ನಾನು ಬಂದು ನೋಡಿಕೊಂಡು ಹೋಗಿರುತ್ತೇನೆ. ನಾನು 6 ತಿಂಗಳು ವರ್ಷಕ್ಕೆ ಬಂದಿರುತ್ತೇನೆ. ನಾನು ಚಾಸ-1 ಮತ್ತು ಆರೋಪಿ ಮನೆಗೆ ಬಂದು ನೋಡಿಕೊಂಡು ಹೋಗುವಾಗ ಅವರು ಚೆನ್ನಾಗಿ ಇರುತ್ತಾರೆ. ಆರೋಪಿಗೆ ನೀಡಿದ ಬ್ರಾಸ್ ಲೈಟ್ ಕತ್ತಿನ ಚೈನ್ ನೀಡಿದ ಬಗ್ಗೆ ದಾಖಲೆಗಳನ್ನು ಪೋಲಿಸರಿಗೆ ನೀಡಿರುತ್ತೀರಾ ಎಂದರೆ ಎಲ್ಲಾ ಒಡವೆಗಳನ್ನು ಅವರೇ ಮಾಡಿಸಿಕೊಂಡಿದ್ದು ರಸೀದಿ ಅವರೇ ಇಟ್ಟುಕೊಂಡಿರುತ್ತಾರೆ. ವ ಮದುವೆ ಕಾಲಕ್ಕೆ ನಾವು 3 ಲಕ್ಷ ರೂಗಳನ್ನು ನಗದಿನ ಮೂಲಕ ನೀಡಿದ್ದು ಯಾವುದೇ ಖಾತೆ ಮೂಲಕ ನೀಡಿರುವುದಿಲ್ಲ. 3 ಲಕ್ಷ ರೂಗಳನ್ನು ಆರೋಪಿಗೆ ವರದಕ್ಷಣೆಯಾಗಿ

ನೀಡಿರುವುದಿಲ್ಲ ಎಂದರೆ ನೀಡಿರುತ್ತೇವೆ. ಮದುವೆಯನ್ನು ಚಿಂತಾಮಣಿಯ ಭಾಗ್ಯಲಕ್ಷ್ಮಿ ಕಲ್ಯಾಣ ಮಂಟಪದಲ್ಲಿ ಮಾಡಿರುತ್ತೇವೆ. ಮದುವೆ ಖರ್ಚು ವೆಚ್ಚಗಳನ್ನು ಆರೋಪಿ ತಂದೆ ತಾಯಿ ಮತ್ತು ಆರೋಪಿ ಭರಿಸಿರುತ್ತಾರೆ ಎಂದರೆ ಹೌದು. ಚಿಂತಾಮಣಿ ಆರೋಪಿ ಮತ್ತು ಚಾಸ-1 ಅನ್ಯೋನ್ಯವಾಗಿ ಇದ್ದಾಗಲೇ 2 ಮಕ್ಕಳಾಗಿರುತ್ತದೆ ಎಂದರೆ ಹೌದು. ಆರೋಪಿಯು ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದ ಬಗ್ಗೆ ನಿಮಗೆ ಹೇಗೆ ಗೊತುತ ಎಂದರೆ ನನ್ನ ತಂಗಿ ಹೇಳಿರುತ್ತಾರೆ. ಕಿರುಕುಳ ನೀಡುತ್ತಿದ್ದ ಬಗ್ಗೆ ಆಗ ಪೋಲಿಸ್ ಠಾಣೆಯಲ್ಲಿ ದೂರು ನೀಡಲು ತೊಂದರೆ ಇತ್ತಾ ಎಂದರೆ ನಾವು ಬಂದು ಬಗೆಹರಿಸಿರುತ್ತೇವೆ, ಯಾವ ಕಾರಣಕ್ಕೆ ಹಣ ಬೇಕು ಅಂತ ನೀವಾಗಲೀ ನಿಮ್ಮ ತಂದೆ ತಾಯಿಯಾಗಲೀ ವಿಚಾರರ ಮಾಡಿರುತ್ತೀರಾ ಎಂದರೆ ಮಾಡಿರುತ್ತೇವೆ.

ಚಿಂತಾಮಣಿಯ ಯಾವ ಏರಿಯಾದಲ್ಲಿ ಮನೆ ಮಾಡಿರುತ್ತಾರೆ ಎಂದರೆ ನ್ಯೂ ಪಬ್ಲಿಕ್ ಶಾಲೆಯ ಹತ್ತಿರ ಮಾಡಿದ್ದು ಹಣ ನಾವೇ ಕೊಟ್ಟಿರುತ್ತೇವೆ. ಆಮನೆಯಲ್ಲಿ ಬಾಡಿಗೆ ಇರುತ್ತಾರೆ ಬಾಡಿಗೆ ಇರುವುದಕ್ಕೆ ಬಾಡಿಗೆ ಕರಾರು ಪತ್ರವನ್ನು ಬರೆಸಿರುತ್ತಾರೆ ಆ ಬಾಡಿಗೆ ಕರಾರು ಪತ್ರವನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ ನಿಮ್ಮ ತಂಗಿ ಮತ್ತು ಆರೋಪಿ ಪ್ರತ್ಯೇಕವಾಗಿ ಮನೆ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಚಾಸ-1 ರವರು ಮದುವೆಯಾದ ನಂತರ ಆರೋಪಿ ಜೊತೆ ಎರಡು ವರ್ಷ ಇದ್ದು ನಂತರ ಅವರೇ ಸ್ವತಃ ಬೆಂಗಳೂರಿಗೆ ಹೋಗಿ ವಾಸ ಇರುತ್ತಾರೆ ಎಂದರೆ ಸುಳ್ಳು ಯಾವ ಬಿಜಿನೆಸ್ ಗೆ ಆರೋಪಿ ಹಣ ಕೇಳಿರುತ್ತಾರೆ ಎಂದರೆ ಲಾರಿ ಟ್ರಾನ್ಸ್ ಪೋರ್ಟ್ ನಷ್ಟವಾದಾಗ ಹಣ ಕೇಳಿರುತ್ತಾರೆ. ಲಾರಿ ಟ್ರಾನ್ಸ್ ಪೋರ್ಟ್ ಮಾಡಲು ಪರವಾನಗಿ ಇರಬೇಕು ಅದರ ಬಗ್ಗೆನಿಮಗೆ ಗೊತ್ತಿದೆ ಎಂದರೆ ಗೊತ್ತಿಲ್ಲ. ಲಾರಿ ಟ್ರಾನ್ಸ್ ಪೋರ್ಟ್ ಮಾಡುತ್ತಿದ್ದಾರೆ ಎಂಬ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ನೀಡಿದ್ದೀರಾ ಎಂದರೆ ಇಲ್ಲ.

ಬೆಂಗಳೂರಿನ ಪುಟ್ಟೇನಹಳ್ಳಿಯ ಪೋ. ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತೇವೆ. ದೂರರು ನೀಡಲು ನನ್ನ ತಂಗಿ ಜೊತೆನಾನು ಹೋಗಿರುತ್ತೇನೆ. ದೂರನ್ನು ನನ್ನ ತಂಗಿ ಬರೆದುಕೊಟ್ಟಿರುತ್ತಾರೆ. ದೂರಿನಲ್ಲಿ ಏನೇನು ಅಂಶಗಳು ಇವೆ ಎಂದು ನಿಮಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಇಲ್ಲ. ಪೋಲಿಸ್ ಠಾಣೆಯಲ್ಲಿ ಹೇಳಿಕೆ ಕೊಡುವಾಗ ನಾನು ಮತ್ತು ಶ್ರೀನಿವಾಸ್ ಇರುತ್ತೇವೆ. ಪೋಲಿಸರು ಹೇಳಿಕೆಯಲ್ಲಿ ಏನೇನು ಬರೆದಿರುತ್ತಾರೆ ಅಂತ ನಿಮಗೆ ಗೊತ್ತ ಎಂದರೆ ಅಷ್ಟಾಗಿ ಗೊತ್ತಿಲ್ಲ. ದಿ:17-2-21 ರಂದು ಪೋ. ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಹೇಳಿಕೆಯನ್ನು ಯಾವ ಪೋಲಿಸರು ಬರೆದುಕೊಂಡರು ಅಂತ ಅವರ ಹೆಸರು ಹೇಳಲಾಗುವುದಿಲ್ಲ.

ಪಂಚನಾಮೆಗೆ ಸಹಿ ಮಾಡಲು ಪೋಲಿಸರು ನಿಮಗೆ ನೋಟೀಸು ಕೊಟ್ಟಿರುತ್ತಾರಾ ಎಂದರೆನಾವೇ ಅವರನ್ನು ಕರೆದಿರುತ್ತೇವೆ ಪಂಚನಾಮೆ ಕಾಲಕ್ಕೆ ಎಷ್ಟು ಜನ ಇರುತ್ತಾರೆ ಎಂದರೆ ನಾನು, ಶ್ರೀನಿವಾಸ್ ಮತ್ತು ಪೋಲಿಸರು ಇರುತ್ತಾರೆ. ಪಂಚನಾಮೆಯಲ್ಲಿ ಪೋಲಿಸರು ಏನೇನು ಬರೆದಿರುತ್ತಾರೆ ಅಂತ ಮಾಹಿತಿ ಇದೆಯಾ ಮಾಹಿತಿ ಇಲ್ಲ. ಪಂಚನಾಮೆಯಲ್ಲಿ ಇರುವ ವಿಷಯವನ್ನು ಪೋಲಿಸರು ಓದಿ ತಿಳಿಸಿರುವುದಿಲ್ಲ. ಉತ್ತರಕ್ಕೆ ನರಸಿಂಹಪ್ಪ, ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಾಮಕೃಷ್ಣಪ್ಪ ರವರ ಮನೆ. ನೀವು ಹೇಳಿದ ಚೆಕ್ಕುಬಂದಿ ಘಟನಾ ಸ್ಥಳದಲ್ಲಿ ಇಲ್ಲ ಎಂದರೆ ಇದೆ. ಪಂಚನಾಮೆಗೆ ಮೊದಲು ನಾನೇ ಸಹಿ ಮಾಡಿರುತ್ತೇನೆ. ಪೋಲಿಸರರೇ ಪಂಚನಾಮೆಯನ್ನು ಕೈಯಲ್ಲಿ ಬರೆದಿದ್ದು ಯಾರು ಅಂತ ಗೊತ್ತಿಲ್ಲ. ಪಂಚನಾಮೆ ಮಾಡುವ ಕಾಲಕ್ಕೆ ಮೂರು ಜನ ಪೋಲಿಸರು ಬಂದಿರುತ್ತಾರೆ. ನೀವು ಹೇಳಿದ ದಿನಾಂಕದಂದು ಘಟನಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ

ಸರಿಯಲ್ಲ. ಪೋಲಿಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಚಾಸಾ1 ರವರು ನಿಮ್ಮ ತಂಗಿಯಾಗಿದ್ದು ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದೆ ಸರಿಯಲ್ಲ. 2 ವರ್ಷಗಳ ಕಾಲ ಆರೋಪಿ ಜೊತೆ ಇದ್ದು ನಂತರ ಬೆಂಗಳೂರಿಗೆ ಹೋಗಿ ಇಲ್ಲಿಯವರೆಗೆ ಅತ್ತೆ ಮಾವವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮಕ್ಕಳನ್ನು ನೋಡಲು ಬೆಂಗಳೂರಿಗೆ ಹೋದರೆ ಅವರನ್ನು ತೋರಿಸಿರುವುದಿಲ್ಲ ಎಂದರೆ ಸುಳ್ಳು ಚಾಸಾ1 ರವರು ಐಷಾರಾಮಿ ಜೀವನ ಮಾಡಲು ಗಂಡ ಮತ್ತು ಅತ್ತೆ ಮಾವರವರನ್ನು ಬಿಟ್ಟು ಬೆಂಗಳೂರಿನಲ್ಲಿ ಜೀವನ ಮಾಡುತ್ತಿದ್ದಾರೆ ಎಂದರೆ ಸುಳ್ಳು ಆರೋಪಿ ವಿರುದ್ದ ದ್ವೇಷ ತೀರಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಹಣಕ್ಕಾಗಿ ಆರೋಪಿ ಯಾವತ್ತೂ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಹಣ ತೆಗೆದುಕೊಂಡು ಬರುವಂತೆ ಕತ್ತು ಹಿಸಿಕಿರುತ್ತಾರೆ, ಅದರ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂದೆ ಹಾಜರುಪಡಿಸಿರುತ್ತೇನೆ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.